# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 182 |
| ಸದಸ್ಯರ ಹೆಸರು | : | ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 28-01-2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಬಳ್ಳಾರಿ ಜಿಲ್ಲೆ, ಕಂಪ್ಲಿ ಪಟ್ಟಣ ವ್ಯಾಪ್ತಿಯ ರಾಜ್ಯ ಹೆದ್ದಾರಿಯಲ್ಲಿ ಬರುವ ತುಂಗಭದ್ರಾ ನದಿಗೆ ಅಡ್ಡಲಾಗಿ ಹೊಸ ಸೇತುವೆ ನಿರ್ಮಾಣ ಕಾಮಗಾರಿಯನ್ನು ನಡೆಸಲು ಉದ್ದೇಶಿಸಲಾಗಿದೆಯೇ? (ಇದರಲ್ಲಿ ವಿವರಗಳನ್ನು ಒದಗಿಸುವುದು:) | ಮುದುಗಲ್-ಕುಡಿತಿನಿ ರಸ್ತೆ (ರಾಜ್ಯ ಹೆದ್ದಾರಿ-29) ರಲ್ಲಿ ಕಂಪ್ಲಿ ಪಟ್ಟಣದ ಹತ್ತಿರ ಕಿಮೀ.80.40 ರಲ್ಲಿ ಬರುವ ಹಾಗೂ ತುಂಗಭದ್ರ ನದಿಗೆ ಅಡ್ಡಲಾಗಿ ಹಾಲಿ ಇರುವ ಸೇತುವೆಯು ಶಿಥಿಲಾವಸ್ಥೆಯಲ್ಲಿದ್ದು, ಈ ಭಾಗದಲ್ಲಿ ಹೊಸ ಸೇತುವೆ ನಿರ್ಮಾಣವನ್ನು ರೂ.100.00 ಕೋಟಿಗಳ ಅಂದಾಜು ಮೊತ್ತದಲ್ಲಿ ಲೋಕೋಪಯೋಗಿ ಇಲಾಖೆವತಿಯಿಂದ ಕೈಗೊಳ್ಳಲು ಆದೇಶ ಸಂಖ್ಯೆ ಲೋಇ/839/ ಐಎಫ್ಎ/2025 ದಿನಾಂಕ: 27-11-2025 ರಲ್ಲಿ ಅನುಮೋದನೆಯನ್ನು ನೀಡಲಾಗಿರುತ್ತದೆ. (ಆದೇಶದ ಪ್ರತಿಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ) |
| ಆ) | ಪ್ರಸ್ತುತ ಇರುವ ಸೇತುವೆಯನ್ನು ಯಾವಾಗ ಕಟ್ಟಲಾಗಿದೆ ಮತ್ತು ಅದರ ಬಾಳಿಕೆಯ ಅವಧಿ ಎಷ್ಟು? ಪ್ರಸ್ತುತ ಇರುವ ಸೇತುವೆಯ ಗುಣಮಟ್ಟ ಎಷ್ಟಿದೆ: (ವಿವರಗಳನ್ನು ಒದಗಿಸುವುದು) | ಮುದುಗಲ್-ಕುಡಿತಿನಿ ರಸ್ತೆ (ರಾಜ್ಯ ಹೆದ್ದಾರಿ-29) ರಲ್ಲಿ ಕಂಪ್ಲಿ ಪಟ್ಟಣದ ಹತ್ತಿರ ಕಿಮೀ.80.40 ರಲ್ಲಿರುವ ಸೇತುವೆಯನ್ನು 1961 ರಲ್ಲಿ ನಿರ್ಮಿಸಲಾಗಿರುತ್ತದೆ. ನದಿಯಲ್ಲಿ ಪ್ರವಾಹ ಉಂಟಾದಾಗ ಸೇತುವೆಯು ಸಂಪೂರ್ಣವಾಗಿ ಮುಳುಗಡೆಯಾಗಿ, ವಾಹನಗಳ ಸಂಚಾರವು ಸ್ಥಗಿತಗೊಳ್ಳುತ್ತದೆ. ಈ ಸೇತುವೆಯನ್ನು 2019-20ರಲ್ಲಿ ಲೋಕೋಪಯೋಗಿ ಇಲಾಖೆಯ ಅಂಗ ಸಂಸ್ಥೆಯಾದ ಯೋಜನೆ ಮತ್ತು ರಸ್ತೆ ಆಸ್ತಿಗಳ ನಿರ್ವಹಣಾ ಕೇಂದ್ರ (PRAM-C) ವತಿಯಿಂದ ಪರಿವೀಕ್ಷಣೆ ನಡೆಸಿದ್ದು, ಬದಲಿ ಅಲೈನ್‌ಮೆಂಟ್‌ನಲ್ಲಿ ಒಂದು ಹೊಸ High Level Bridge ನಿರ್ಮಿಸುವುದು ಸೂಕ್ತವಾಗಿರುತ್ತದೆಂದು ವರದಿ ನೀಡಿರುತ್ತಾರೆ. ಸದರಿ ಸೇತುವೆಯ ಸ್ಥಿತಿಯ ಬಗ್ಗೆ ಯೋಜನೆ ಮತ್ತು ರಸ್ತೆ ಆಸ್ತಿಗಳ ನಿರ್ವಹಣಾ ಕೇಂದ್ರ (PRAM-C) ರವರ ವರದಿಯಲ್ಲಿ ಕೆಳಗಿನಂತೆ ತಿಳಿಸಲಾಗಿದೆ.<br>1) Existing Length of Bridge -586.5 Mtr<br>Existing Width of Bridge -7.50 Mtr<br>2) The existing Bridge is a Submersible Bridge and the water over flows by around 2.00 to 2.50m above Bridge during Rainy seaso<br>3) Slight honey Combing observed in soffit of slab at edges in 4 to spans.<br>4) Slight Dampness observed on the cantilever portion of the slab a edges.<br>5) Expansion joints fully blocked.<br>6) Scour of around 0.60m at abutment A1 location (Gangavathi side).<br>7) MS Railings slightly damaged and wearing coat worn out. |

| ಕ್ರ ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಇ) | ಹೊಸ ಸೇತುವೆ ನಿರ್ಮಾಣದ ಪ್ರಗತಿ ಯಾವ ಹಂತದಲ್ಲಿದೆ; ಯಾವಾಗ ಪ್ರಾರಂಭ ಮಾಡಲಾಗುವುದು; ಅದಕ್ಕೆ ಒದಗಿಸಲಾಗಿರುವ ಅನುದಾನ ಎಷ್ಟು? (ವಿವರಗಳನ್ನು ಒದಗಿಸುವುದು) | ಸೇತುವೆಯ ಸ್ಥಳದಲ್ಲಿ ವಿವರವಾದ ಅಧ್ಯಯನ ನಡೆಸಿ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ತಯಾರಿಸುವ ಸಲುವಾಗಿ ಸಮಾಲೋಚಕರನ್ನು ನೇಮಿಸಲು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ದಿನಾಂಕ:20-01-2026 ರಂದು ಅನುಮೋದಿತ ಸಮಾಲೋಚಕರಾದ M/S Infra Support Engineering Consultants Private Limited (K.B. Rathnakara Reddy) ಇವರಿಗೆ LOA ಜಾರಿಗೊಳಿಸಿ 7 ದಿನಗಳ ಒಳಗಾಗಿ ಕರಾರು ಪತ್ರವನ್ನು ಮಾಡಿಕೊಳ್ಳಲು ಸೂಚಿಸಲಾಗಿದೆ. ಗುತ್ತಿಗೆ ಒಡಂಬಡಿಕೆ ಮಾಡಿಕೊಂಡ ನಂತರ ಒಂದು ತಿಂಗಳ ಅವಧಿಯೊಳಗಾಗಿ ವಿಸ್ತೃತ ಯೋಜನಾ ವರದಿಯನ್ನು ಸಮಾಲೋಚಕರಿಂದ ತಯಾರಿಸಿ ಮುಂದಿನ ಪ್ರಕ್ರಿಯೆಗಳನ್ನು ಜರುಗಿಸಲಾಗುವುದು. |

ಸಂಖ್ಯೆ: ಲೋಇ 19 ಸಿಐಎಸ್ 2026 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: **ಕಂಪ್ಲಿ ವಿಧಾನಸಭಾ ಕ್ಷೇತ್ರ** ವ್ಯಾಪ್ತಿಯಲ್ಲಿ ಬರುವ ಪುನರ್ ನಿರ್ಮಾಣ ಮತ್ತು ಪುನಶ್ಚೇತನ ಸೇತುವೆ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂ. ಲೋಇ 434 ಸಿಆರ್‌ಎಂ:2025 (ಇ) ದಿನಾಂಕ 27-11-2025
2. ಕಂಡಿಕೆ 16ರಲ್ಲಿ ಅನುಮೋದನೆ

**ಪ್ರಸ್ತಾವನೆ**

2025-26ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ಸೇತುವೆಗಳ ಪುನರ್ ನಿರ್ಮಾಣ ಮತ್ತು ಪುನಶ್ಚೇತನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ರೂ.1000.00ಕೋಟಿ ಅನುದಾನವನ್ನು ಒದಗಿಸಲಾಗಿದೆ. ಆ ಮೊತ್ತದಲ್ಲಿ PRAMC ಅಧ್ಯಯನದಲ್ಲಿ ಗುರುತಿಸಿರುವ 39 ಬೃಹತ್ ಸೇತುವೆಗಳ ಪುನರ್ ನಿರ್ಮಾಣ ಮತ್ತು ಪುನಶ್ಚೇತನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಜೊತೆಗೆ ಇನ್ನು ಹೆಚ್ಚುವರಿಯಾಗಿ **ರೂ. 1000.00ಕೋಟಿ** ಅಂದಾಜು ಮೊತ್ತದಲ್ಲಿ ಅತೀ ಅವಶ್ಯವಿರುವ ಇತರ ಸಣ್ಣ ಸೇತುವೆಗಳ ಪುನರ್ ನಿರ್ಮಾಣ / ಪುನಶ್ಚೇತನ, ಅತೀವೃಷ್ಟಿಯಿಂದ ಹಾನಿಗೊಳಗಾದ ಸೇತುವೆಗಳ ದುರಸ್ತಿ ಪುನರ್ ನಿರ್ಮಾಣ ಮತ್ತು ಮಲೆನಾಡು ಹಾಗೂ ಕರಾವಳಿ ಭಾಗಗಳಲ್ಲಿ ಸಂಪರ್ಕ ರಹಿತ ಜನವಸತಿ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಕಾಲುಸಂಕಗಳ ನಿರ್ಮಾಣವನ್ನು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿ ಅದರಂತೆ ಒಟ್ಟಾರೆಯಾಗಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸೇತುವೆಗಳ ದುರಸ್ತಿ, ಪುನರ್ ನಿರ್ಮಾಣ ಮತ್ತು ಪುನಶ್ಚೇತನ ಕಾಮಗಾರಿಗಳನ್ನು **ರೂ.2000.00ಕೋಟಿ** ಅಂದಾಜು ಮೊತ್ತದಲ್ಲಿ ಕೈಗೆತ್ತಿಕೊಳ್ಳಲು ಮೇಲೆ ಓದಲಾದ (1)ರ ಆದೇಶದಲ್ಲಿ ತಾತ್ವಿಕ ಅನುಮೋದನೆ ನೀಡಲಾಗಿರುತ್ತದೆ. ಈ ಹಿನ್ನಲೆಯಲ್ಲಿ **ಕಂಪ್ಲಿ ವಿಧಾನಸಭಾ ಕ್ಷೇತ್ರ** ವ್ಯಾಪ್ತಿಯಲ್ಲಿ ಸೇತುವೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಮೇಲೆ ಓದಲಾದ (2)ರ ಅನುಮೋದನೆಯಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂ: ಲೋಇ:839:ಐಎಫ್ಎ:2025 (ಇ-ಕಛೇರಿ) ಬೆಂಗಳೂರು, ದಿನಾಂಕ:27-11-2025**

**ಕಂಪ್ಲಿ ವಿಧಾನಸಭಾ ಕ್ಷೇತ್ರ** ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಸೇತುವೆ ಕಾಮಗಾರಿಯನ್ನು **ರೂ.10000.00ಲಕ್ಷ** ಅಂದಾಜು ಮೊತ್ತದಲ್ಲಿ ಲೋಕೋಪಯೋಗಿ ವಿಭಾಗದಿಂದ ಕೈಗೆತ್ತಿಕೊಳ್ಳಲು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಅನುಮೋದನೆ ನೀಡಲಾಗಿದೆ. ವಿವರ ಕೆಳಕಂಡಂತಿದೆ:

**(ರೂ.ಲಕ್ಷಗಳಲ್ಲಿ)**

| ಕ್ರ. ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ |
|---|---|---|
| | **ಲೆ.ಶೀ. 5054-80-190-0-01-132**<br>**ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ-ಬಂಡವಾಳ ವೆಚ್ಚ** | |
| 1 | ಬಳ್ಳಾರಿ ಜಿಲ್ಲೆಯ ಕಂಪ್ಲಿ ಪಟ್ಟಣ ವ್ಯಾಪ್ತಿಯ ರಾಜ್ಯ ಹೆದ್ದಾರಿ-29ರ ಸರಪಳಿ 80.40 ಕಿ.ಮೀ.ನಲ್ಲಿ ಬರುವ ತುಂಗಭದ್ರಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿ. | 10000.00 |
| | **ಒಟ್ಟು** | **10000.00** |

**ಕಾಮಗಾರಿಗಳ ಪಟ್ಟಿಯನ್ನು ಸಿದ್ಧಪಡಿಸುವಾಗ ಹಾಗೂ ಅನುಷ್ಠಾನಗೊಳಿಸುವಾಗ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು.**

1. ಅಂದಾಜು ಪಟ್ಟಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆಯನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಳ್ಳತಕ್ಕದ್ದು.

2. ಸಹಮತಿಸಲಾದ ಅನುದಾನದ ಮಿತಿಯಲ್ಲಿಯೇ ಕಾಮಗಾರಿಗಳ ಅಂದಾಜನ್ನು ಪ್ರಚಲಿತ ದರಪಟ್ಟಿಯನ್ವಯ ತಯಾರಿಸತಕ್ಕದ್ದು. ಅಂತಹ ಅಂದಾಜಿನಲ್ಲಿ ಸಹಮತಿಸಿದ ಅನುದಾನದ ಮಿತಿಯಲ್ಲಿಯೇ ಟೆಂಡರ್ ಪ್ರೀಮಿಯಂ ಕೂಡ ಒಳಗೊಂಡಿರತಕ್ಕದ್ದು. ಯಾವುದೇ ಕಾರಣಕ್ಕೂ ಅಂದಾಜಿನಲ್ಲಿ ನಿರ್ಣಾಯಕ ಐಟಂಗಳು ಕೈಬಿಟ್ಟು ಹೋಗದಂತೆ ನೋಡಿಕೊಳ್ಳತಕ್ಕದ್ದು.

3. ಪ್ರಸ್ತಾಪಿಸಿದ ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.

4. ಪ್ರಸ್ತಾಪಿಸಿದ ಕಾಮಗಾರಿಗಳಡಿ ಅಂದಾಜನ್ನು ಪರಿಷ್ಕರಿಸುವುದನ್ನು EIRL ಹಾಗೂ ವರ್ಕ್‌ಸ್ಲಿಪ್ ಸಿದ್ಧಪಡಿಸುವುದನ್ನು ನಿರ್ಬಂಧಿಸಿದೆ.

5. ಆಡಳಿತಾತ್ಮಕ ಅನುಮೋದನೆಯನ್ನು ಸಕ್ಷಮ ಪ್ರಾಧಿಕಾರವು 15 ದಿನಗಳೊಳಗಾಗಿ ನೀಡತಕ್ಕದ್ದು.

6. ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಅಧಿನಿಯಮ ಮತ್ತು ನಿಯಮಗಳ ಅಡಿಯಲ್ಲಿ, ಹಾಗೂ ಸರ್ಕಾರದ ಅಧಿಸೂಚನೆ ಸಂ.ಸಿಆಸುಇ 2 ಇಸಂಗ್ರ 2009, ದಿನಾಂಕ 09-10-2012ರ ಪ್ರಕಾರ ಟೆಂಡರ್ ಕರೆದು ನಿರ್ವಹಣೆಗೆ ಕ್ರಮವಹಿಸತಕ್ಕದ್ದು ಹಾಗೂ ಸರ್ಕಾರದ ಸುತ್ತೋಲೆ ಸಂ.ಲೋಇ/07/ಐಎಫ್ಎ/2013 ದಿನಾಂಕ 16-01-2013ರ ಪ್ರಕಾರ ನಿರ್ವಹಿಸತಕ್ಕದ್ದು.

7. ಈ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಾಗ ಸರ್ಕಾರದ ಆದೇಶ ಸಂ.ಲೋಇ 272 ಆಕೋ-2/2013 ದಿನಾಂಕ 24-04-2013ರಂತೆ ಕ್ರಮವಹಿಸತಕ್ಕದ್ದು.

8. ಸದರಿ ಕಾಮಗಾರಿಗಳು ಸ್ಥಳೀಯ ಸಂಸ್ಥೆಗಳ / ಇತರೆ ಇಲಾಖೆಗಳ ಕ್ರಿಯಾ ಯೋಜನೆಗಳಲ್ಲಿ, ಇತರೆ ಕಾರ್ಯಕ್ರಮಗಳ ಕ್ರಿಯಾ ಯೋಜನೆಯಲ್ಲಿ ಹಾಗೂ ಈ ಹಿಂದಿನ ಅಪೆಂಡಿಕ್ಸ್-ಇ ಅಡಿ ಅಭಿವೃದ್ಧಿಪಡಿಸಲಾಗದಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು,

9. ಕಾಮಗಾರಿಗಳು ಮುಕ್ತಾಯಗೊಂಡ ನಂತರ ಬಿ.ಆರ್.ಸಂಖ್ಯೆ ಮತ್ತು ದಿನಾಂಕ ವಿವರಗಳೊಂದಿಗೆ ಇಲಾಖೆಯ ಅಂತರ್ಜಾಲದಲ್ಲಿ ಅಳವಡಿಸಿದ ನಂತರವೇ ಹಣ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ದಿನಾಂಕ 09-10-2025ರಂದು ನಡೆದ ಸಚಿವ ಸಂಪುಟ ಸಭೆಯ ಪ್ರಕರಣ ಸಂ.ಸಿ.836/2025ರಲ್ಲಿ ತೆಗೆದುಕೊಂಡ ತಿರ್ಮಾನದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಡಾ. ಸೋಮನಾಥ)**
ಆಂತರಿಕ ಆರ್ಥಿಕ ಸಲಹೆಗಾರರು
ಲೋಕೋಪಯೋಗಿ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ನ್ಯೂ ಬಿಲ್ಡಿಂಗ್, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿಗಳು,(ವೆಚ್ಚ) ಆರ್ಥಿಕ ಇಲಾಖೆ (ಆಯವ್ಯಯ ಮತ್ತು ಸಂಪನ್ಮೂಲ), ವಿಧಾನಸೌಧ, ಬೆಂಗಳೂರು.
3. ವಿಶೇಷಾಧಿಕಾರಿಗಳು, ಲೋಕೋಪಯೋಗಿ (ಆರ್ಥಿಕ ಕೋಶ), ಆರ್ಥಿಕ ಇಲಾಖೆ ವಿಧಾನಸೌಧ, ಬೆಂಗಳೂರು
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಈಶಾನ್ಯ) ಕಲಬುರಗಿ
5. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
6. ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿಗಳು
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ
8. ಕಛೇರಿ ಪ್ರತಿ